


### ಉತ್ತಮ ಲೇಖನ

ಡಾ. ಡಿ.ಕೆ. ಮಹಾಬಲರಾಜು ಅವರ 'ಪಾಸಿಟಿವ್ ಪ್ರಪಂಚದಲ್ಲಿ' ಲೇಖನ ಉತ್ತಮವಾಗಿತ್ತು. ಸ್ಥೈರ್ಯ ತುಂಬುವಂತಿತ್ತು.

-ಪಿ. ಗೋವಿಂದರಾಜ್, ಶಿವಮೊಗ್ಗ, ಮುಗುಳವಳ್ಳಿ ಸದಾಶಿವ, ಚಿಕ್ಕಮಗಳೂರು, ಬಿ.ಎಸ್.ಮುಳ್ಳೂರ, ಹಲಗತ್ತಿ

### ಏಡ್ಸ್ ಮುಂಜಾಗ್ರತೆ: ಆಗಾಗ ಪ್ರಕಟಿಸಿ

ಇತರ ಕಾಯಿಲೆಗಳಿಗೆ ಔಷಧಿ ತೆಗೆದುಕೊಳ್ಳುವಂತೆ ಎಚ್‌ಐವಿ (ಏಡ್ಸ್)ಗೆ ಪ್ರತಿದಿನ ಔಷಧಿ ತೆಗೆದು ಕೊಂಡರೆ ಮನುಷ್ಯ ಬಹಳ ಕಾಲ ಬದುಕಬಹುದು ಎಂಬುದು 'ಪಾಸಿಟಿವ್... 'ಲೇಖನದಿಂದ ಗೊತ್ತಾಯಿತು. ಈ ವಿಷಯ ಗೊತ್ತಿರದ ನನ್ನ ಸಂಬಂಧಿಯೊಬ್ಬರು ಎಚ್‌ಐವಿ ಸೋಂಕಿನಿಂದ ತನ್ನ 40ನೇ ವರ್ಷಕ್ಕೇ ನಿಧನರಾದರು. 'ಸುಧಾ' ಪತ್ರಿಕೆಯಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಏಡ್ಸ್ ವಿರುದ್ಧ ಎಚ್ಚರ ಮೂಡಿಸುವ ಲೇಖನ ಪ್ರಕಟಿಸಬೇಕೆಂದು ವಿನಂತಿ.

-ಕೆ.ಆರ್.ದೇಸಾಯಿ, ಜೆ.ಬಿ.ಕಟ್ಟಿ, ರಾಯಚೂರು

### ವೈಜ್ಞಾನಿಕ ವಿಶ್ಲೇಷಣೆ ಅಗತ್ಯ

'ಭವಿಷ್ಯವೆಂಬ ಭೂತ' ವೈಚಾರಿಕ ಲೇಖನ ಚಿಂತನಾರ್ಹವಾಗಿತ್ತು. ಹಸ್ತ ಸಾಮುದ್ರಿಕೆ, ಕವಡೆ ಶಾಸ್ತ್ರ, ಗಿಣಿ ಶಾಸ್ತ್ರ, ಜಾತಕ ಇವುಗಳ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆ ಅಗತ್ಯವಿದೆ.

-ಎ.ಕೆ. ಪಟ್ಟಾಭಿ, ಬೆಂಗಳೂರು

### ಸಹಜ ಕಥೆ

ಜಿ. ತಿಪ್ಪೇಸ್ವಾಮಿಯವರ 'ಬಸುರು ಅಂದರೆ...' ಕಥೆ ಸಹಜವಾಗಿ ಮೂಡಿಬಂದಿದೆ.

-ರಾಜಹಂಸ, ಕೊಟ್ಟೂರು

### ರೋಗಿಯ ಕಥನ

'ಓ ಸಾವೇ, ನಿನಗಿಲ್ಲ ಇಲ್ಲಿ ತಾವು..' ಸುಧಾ ಹೆಗಡೆ ಲೇಖನ ನೈಜ ರೋಗಿಯೊಬ್ಬನ ಕಥೆ ಹೇಳಿತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಪ್ರವಾಸದ ಮಾಹಿತಿ

ಬಿ.ಎನ್. ಮನೋಹರ್ ಬರೆದ 'ಬುಲೆಟ್ ರೈಲಿನಲ್ಲಿ ಜಪಾನ್ ದರ್ಶನ' ಭಾರತದಿಂದ ಅಲ್ಲಿಗೆ ಪ್ರವಾಸಕ್ಕೆಂದು ಹೋಗಿ ಬರುವವರಿಗೆ ಒಳ್ಳೆಯ ಮಾಹಿತಿ ನೀಡಿದೆ.

-ಪಿ.ಎನ್. ಶ್ರೀವತ್ಸ, ಬೆಂಗಳೂರು/ ಮೊಳಕಾಲ್ಮುರು ಸುರೇಶ, ಬಳ್ಳಾರಿ

### ನೀರೊಳಗಿನ ಬೆರಗು...

ಡಾ. ಜೆ. ಬಾಲಕೃಷ್ಣರ ಬರಹ ಆಶ್ಚರ್ಯವನ್ನುಂಟು ಮಾಡಿತು.

-ರವೀಂದ್ರನಾಥ ಯಡಹಳ್ಳಿ, ಬಾಗಲಕೋಟ/ ಎಂ.ಸರ್ದಾರ್, ಅರಸೀಕೆರೆ

### ಚಿಂತನಾರ್ಹ ಬರಹ

'ನಿಮ್ಮೊಡನೆ'ಯಲ್ಲಿ 'ರಿಯಾಲಿಟಿ'ಯೊ 'ಕ್ರುಯಾಲಿಟಿ'ಯೋ? ಬಿ.ಎಂ. ಹನೀಫ್ ಬರಹ ಚಿಂತನಾರ್ಹವಾಗಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಚ(ಧ)ರ್ಮ ಸಂದೇಶ!

'ತೆರೆದೆದೆಯ ಸುಂದರಿ' ಪಮೇಲ ಬಗೆಗಿನ ಅರ್ಧ ಪುಟದ ಚಿತ್ರ–ಲೇಖನ ಪಡ್ಡೆ ಹುಡುಗರ 'ಕಣ್ಣು ತೆರೆಸಿ' ಎದೆಬಡಿತ ಹೆಚ್ಚಾಗುವಂತೆ ಮಾಡಿರುವುದರಲ್ಲಿ ಸಂ–ದೇಹವಿಲ್ಲ. ಪ್ರಾಣಿಗಳ ಚರ್ಮದ ಉತ್ಪನ್ನಗಳ ಬಳಕೆ ತಪ್ಪಿಸಿ, ಎಂದು ಆಕೆ ನಮ್ಮ ಪ್ರಧಾನಿಗೆ ಬರೆದದ್ದೂ ಕೂಡ ಸರಿಯೆ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಸಖತ್ತಾದ ಧಾರಾವಾಹಿ

ಬಿ.ಎಲ್.ವೇಣುರ 'ಸಮರ್ಥರು' ಧಾರಾವಾಹಿ ಸಖತ್ತಾಗಿದೆ. ವಾರ ವಾರ ಇದಕ್ಕಾಗಿ ಕಾಯುವಂತಾಗಿದೆ. ಸಿನಿಮಾ ನೋಡುತ್ತಿದ್ದೇವೇನೋ ಎನಿಸುತ್ತದೆ.

-ಎಲ್. ಚಂದ್ರಶೇಖರ್, ಎಚ್. ಶಿವಕುಮಾರ್, ಬೆಂಗಳೂರು

### ಸಂಪತ್ತಿಗೆ ಸವಾಲು

'ಸಮರ್ಥರು' ಧಾರಾವಾಹಿಯಲ್ಲಿ ಶ್ರೀಮಂತರ ಕೈಲಿ ಸಿಕ್ಕಿ ನರಳುವ ಪ್ರೇಮ, ನಾಯಕ ಸೂರ್ಯನ ದಿಟ್ಟತನ ಓದಿ ಖುಷಿಯಾಯಿತು. ರೆಡ್ಡಿಗೆ ಸವಾಲು ಹಾಕಿ ನಿಲ್ಲಲಿ ಎಂಬುದು ಓದುಗರ ಮನದಾಶೆ.

-ಎನ್. ಮಹೇಂದರ್, ಬೆಂಗಳೂರು

